In the NEWS

**Date: 28-02-2017** Kannada Prabha **Page: 05**

**Edition: Mysore** **Language: Kannada**

### ಅಂತಾರಾಷ್ಟ್ರೀಯ ಟೆನಿಸ್ ಪಟು ಸೋಮದೇವ್ ದೇವ ವರ್ಮನ್ ಸಲಹೆ | ಎಸ್‌ಡಿಎಂಐಎಂಡಿಯಲ್ಲಿ ಕ್ರೀಡಾ ಕೋರ್ಸ್ ಉದ್ಘಾಟನೆ

# ಯಾವುದೇ ನೆಪ ಹೇಳದೇ ಸಾಧನೆಯತ್ತ ಚಿತ್ತೈಸಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತೀಯರು ಸಾಮಾನ್ಯವಾಗಿ ಯಶಸ್ಸಿನ ಹಾದಿಯಲ್ಲಿ ಸಾಗುವ ಮುಂಚೆ ನೆಪ, ಮತ್ತೊಂದು ಅವಕಾಶದಂತ ಮಾತುಗಳನ್ನಾಡುತ್ತಾರೆ. ಇದನ್ನು ಅವಲೋಕಿಸದಲ್ಲಿ ಮೂಲಭೂತ ಸೌಕರ್ಯದ ಕೊರತೆಯೇ ಮುಖ್ಯ ಕಾರಣವಾಗಿ ಕಾಣುತ್ತದೆ ಎಂದು ಅಂತಾರಾಷ್ಟ್ರೀಯ ಟೆನಿಸ್ ಪಟು ಸೋಮದೇವ್ ದೇವ ವರ್ಮನ್ ಅಭಿಪ್ರಾಯಪಟ್ಟರು.

ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿಯಲ್ಲಿ ಸೆಂಟರ್ ಫಾರ್ ಸ್ಪೋರ್ಟ್ಸ್ ಅಂಡ್ ಮ್ಯಾನೇಜ್‌ಮೆಂಟ್ ಜತೆಗೂಡಿ ಏರ್ಪಡಿಸಿದ್ದ ಸ್ಪೋರ್ಟ್ಸ್ ಟಾಕ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ನೆಪ ಹೇಳದೆಯೂ ಸಾಧನೆ ಮಾಡುವತ್ತ ಚಿತ್ತ ಹರಿಸುವ ವ್ಯವಧಾನ ಬೆಳೆಸಿಕೊಳ್ಳಬೇಕು. ಆಫ್ರಿಕಾದ ಜನರು ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಯಶಸ್ಸು ಗಳಿಸುತ್ತಾರೆ. ಅವರಂತೆ ನಮಗೇಕೆ ಆಗುವುದಿಲ್ಲ? ನಾವು ನಮ್ಮ ಮನೋಧರ್ಮವನ್ನು ಬದಲಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಅಂತಹ ಬದಲಾವಣೆಗಳನ್ನು ನಮ್ಮ ದೇಶದಲ್ಲಿ ಕಾಣುತ್ತಿದ್ದೇವೆ ಎಂದರು.



ಮೈಸೂರಿನ ಎಸ್‌ಡಿಎಂಐಎಂಡಿಯಲ್ಲಿ ನಡೆದ ಕ್ರೀಡಾ ಕೋರ್ಸ್ ಉದ್ಘಾಟನಾ ಸಮಾರಂಭದಲ್ಲಿ ಟೆನ್ನಿಸ್ ಪಟು ಸೋಮದೇವ್ ವರ್ಮಾ ಮಾತನಾಡಿದರು.

ಭಾರತವು ಕೈಗಾರಿಕಾ ಕ್ಷೇತ್ರದಲ್ಲಿ ತುರ್ತಾಗಿ ಅಭಿವೃದ್ಧಿ ಹೊಂದಬೇಕಾಗಿದೆ. ವಿದ್ಯಾರ್ಥಿಗಳು ಕ್ರೀಡಾಕ್ಷೇತ್ರದಲ್ಲಿ ಬೆಳೆಯಲು ಕಲಿಕೆಯ ಮಾನದಂಡ ಬೆಳೆಸಿಕೊಂಡು ವೃತ್ತಿಪರರಾಗಬೇಕು. ಇಡೀ ದೇಶದಲ್ಲಿಯೇ ಘನತೆಯ ವೃತ್ತಿಯಾಗಿ ಕ್ರೀಡಾಕ್ಷೇತ್ರ ಪ್ರಚಲಿತದಲ್ಲಿದೆ. ಕ್ರೀಡಾಳುವಿಗೆ ಔದ್ಯೋಗಿಕ ಅವಕಾಶ, ಸಮಾಜದಲ್ಲಿ ಗೌರವ ಲಭಿಸುತ್ತದೆ. ಸಂಸ್ಕೃತಿಯಲ್ಲಿ ಕ್ರೀಡೆಯನ್ನು ಹೊರಗಿನಂತ ಕಾಣಬಾರದು. 1970ರ ಸಂದರ್ಭದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಕಣ್ಣು ಬಿಡುತ್ತಿದ್ದ ಭಾರತ ಇಂದು ಸಾಕಷ್ಟು ಸುಧಾರಿಸಿದೆ. ಕ್ರೀಡಾ ಕ್ಷೇತ್ರದಲ್ಲಿ ಬೆಳೆಯಲು ವಿಪುಲ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಸೋಮದೇವ್ ಅಭಿಪ್ರಾಯಪಟ್ಟರು.

ದಂಗಲ್ ಚಿತ್ರವನ್ನು ಉದಾಹರಣೆ ನೀಡಿದ ಸೋಮದೇವ್, ಜನರು ಸಾಧನೆ ಮಾಡಲು ತಮ್ಮ ಆಸಕ್ತಿ ಕ್ಷೇತ್ರವನ್ನು ಹೇಗೆ ಹಚ್ಚಿಕೊಳ್ಳುತ್ತಾರೆ ಎಂಬುದಕ್ಕೆ ದಂಗಲ್ ಉತ್ತಮ ಉದಾಹಣೆ. ಈ ಸಿನೆಮಾವು ಹೃದಯಸ್ಪರ್ಶಿಯಾಗಿದೆ. ಬದ್ಧತೆ, ಸಮರ್ಪಣಾ ಭಾವ, ಕಠಿಣ ಪರಿಶ್ರಮದೊಂದಿಗೆ ಗೀತಾ ಫೋಗಾಟ್ ಹೇಗೆ ಸಾಧನೆ ಮಾಡಿದರು ಎಂಬುದನ್ನು ಚಿತ್ರ ಸೊಗಸಾಗಿ ತಿಳಿಸಿದೆ ಎಂದು ಸೋಮದೇವ್ ವಿವರಿಸಿದರು. ಅತಿಥಿಯಾಗಿ ಪಾಲ್ಗೊಂಡಿದ್ದ ಮಾಜಿ ಟೆನ್ನಿಸ್ ಆಟಗಾರ ಮುಸ್ತಫಾ ಗೋಷ್ ಅವರು ಕ್ರೀಡಾ ಕ್ಷೇತ್ರ ಪ್ರವೇಶಿಸುವವರಿಗೆ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವುದು ಹಾಗೂ ಕ್ರೀಡಾ ಕೋರ್ಸ್‌ನಿಂದಾಗುವ ಅನುಕೂಲತೆಯ ಬಗ್ಗೆ ತಿಳಿಸಿಕೊಟ್ಟರು.

ಸಿಎಸ್ ಅಂಡ್ ಎಂಎಸ್ ಸಂಸ್ಥಾಪಕ ಸದಸ್ಯ ಎನ್ರಿಕೋ ಪ್ರಿಪರ್ನೋ ಮಾತನಾಡಿ, ಕ್ರೀಡಾ ಕ್ಷೇತ್ರ ಮತ್ತು ಕ್ರೀಡಾ ಪ್ರವಾಸೋದ್ಯಮದಲ್ಲಿ ತೀವ್ರ ಬದಲಾವಣೆಗೆ ಹೊಂದುಕೊಳ್ಳಲು ಶೈಕ್ಷಣಿಕ ಮಾನದಂಡಗಳು ಬೇಕಾಗಿವೆ. ನಿರ್ವಹಣಾ ಕೌಶಲ್ಯ ಕಲಿತುಕೊಳ್ಳಬೇಕು ಎಂದು ತಿಳಿಸಿದರು. ಇದೇ ವೇಳೆ ಎಸ್‌ಡಿಎಂಐಎಂಡಿಯಲ್ಲಿ ಆರಂಭಿಸಲಾದ ನೂತನ ಕ್ರೀಡಾ ಕೋರ್ಸ್ ಆದ ಒಂದು ವರ್ಷ ಅವಧಿಯ 'ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಇನ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್' ಹಾಗೂ ಮೂರು ವರ್ಷ ಅವಧಿಯ 'ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕೋರ್ಸ್'ಗಳಿಗೆ ಟೆನ್ನಿಸ್ ಪಟು ಸೋಮದೇವ್ ದೇವ ವರ್ಮನ್ ಅವರನ್ನು ರಾಯಭಾರಿಯನ್ನಾಗಿ ಘೋಷಿಸಲಾಯಿತು.

Sports Management Course Inauguaration Program 2017